# ವಾರ್ತಾ ಪತ್ರಿಕೆ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ನಂದಿನಗರ, ಅಂಚೆ ಪೆಟ್ಟಿಗೆ ಸಂ. 06, ಬೀದರ – 585 226

ಸಂಪುಟ–19, ಸಂಚಿಕೆ–2 ಜುಲೈ–ಡಿಸೆಂಬರ್, 2023


## ಕುಲಪತಿಗಳ ಮುನ್ನುಡಿ



ವಿಶ್ವವಿದ್ಯಾಲಯವು ಜುಲೈ–ಡಿಸೆಂಬರ್, 2023 ರವರೆಗಿನ ಅವಧಿಯಲ್ಲಿ ಮಾಡಿದ ಪ್ರಮುಖ ಕಾರ್ಯ–ಚಟುವಟಿಕೆಗಳು ಮತ್ತು ಸಾಧನೆಗಳನ್ನು ಈ ವಾರ್ತಾಪತ್ರಿಕೆ ಒಳಗೊಂಡಿದೆ. ಕರ್ನಾಟಕ ಪಶುವೈದ್ಯಕೀಯ ಪರಿಷತ್, ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಹಯೋಗದೊಂದಿಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿನ ವಿಶ್ವಪ್ರಾಣಿ ಆರೋಗ್ಯ ಸಂಸ್ಥೆ, ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ, ಹೈದ್ರಾಬಾದನ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯೊಂದಿಗೆ ಕೇಂದ್ರೀಯ ಕುಕ್ಕುಟ ಅಭಿವೃದ್ಧಿ ಸಂಸ್ಥೆ, ಹೆಸರಘಟ್ಟದೊಂದಿಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಮತ್ತು ಗೇರು ಸಂಶೋಧನಾ ನಿರ್ದೇಶನಾಲಯದೊಂದಿಗೆ ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು, ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ), ಹಳ್ಳಿಖೇಡ ಇವರು ಕರ್ನಾಟಕ ಹಾಲು ಒಕ್ಕೂಟ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯೊಂದಿಗೆ ಹಲವಾರು ಸಹಭಾಗಿತ್ವ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ.

ಶ್ರೀ ಭಾಹುರಾವ್ ದೇಶಪಾಂಡೆ ಪಶುವೈದ್ಯಕೀಯ ಮಹಾವಿದ್ಯಾಲಯ, ಅಥಣಿಯನ್ನು ಕರ್ನಾಟಕದ ಆರನೇ ಪಶುವೈದ್ಯಕೀಯ ಮಹಾವಿದ್ಯಾಲಯವಾಗಿ ಆಗಸ್ಟ್ 11, 2023 ರಂದು ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ. ಸಿದ್ದರಾಮಯ್ಯರವರು ಉದ್ಘಾಟಿಸಿದರು. ವಿಶ್ವವಿದ್ಯಾಲಯದ ಹದಿಮೂರನೇ ಘಟಿಕೋತ್ಸವವನ್ನು 16ನೇ ಅಕ್ಟೋಬರ್, 2023 ರಂದು ಬೀದರನಲ್ಲಿ ಹಮ್ಮಿಕೊಳ್ಳಲಾಯಿತು. ಸದರಿ ಘಟಿಕೋತ್ಸವದಲ್ಲಿ 445 ಸ್ನಾತಕ ವಿದ್ಯಾರ್ಥಿಗಳು, 333 ಸ್ನಾತಕೋತ್ತರ, 59 ಡಾಕ್ಟರೇಟ್ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 837 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಇದಲ್ಲದೇ, ಕರ್ನಾಟಕ ಸರ್ಕಾರದ ನಿರ್ದೇಶನದಂತೆ ನಮ್ಮ ಅಂಗಸಂಸ್ಥೆಗಳಿಂದ ದತ್ತು ಪಡೆದ ಗ್ರಾಮಗಳಲ್ಲಿ ರೈತ ಸಮುದಾಯದ ಅನುಕೂಲಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಬೆಂಗಳೂರಿನ ಯಶ್‌ಲೋಕ ಸಂಸ್ಥೆಯ ಸಹಯೋಗದಲ್ಲಿ ಬೆಂಗಳೂರಿನ ಪಶುವೈದ್ಯಕೀಯ ಮಹಾವಿದ್ಯಾಲಯದ ವಿಸ್ತರಣಾ ಶಿಕ್ಷಣ ಕೇಂದ್ರದಿಂದ "ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ" ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಮುಂದುವರೆದು, ವಿಶ್ವವಿದ್ಯಾಲಯವು ಮುಂದುವರಿದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳನ್ನು ಸಕ್ರೀಯಗೊಳಿಸಲು ರಾಷ್ಟೀಯ ಮತ್ತು ಅಂತರಾಷ್ಟೀಯ ಸಂಸ್ಥೆಗಳೊಂದಿಗೆ ಒಟ್ಟು ಏಳು ಒಡಂಬಡಿಕೆಗಳನ್ನು ಈ ಅವಧಿಯಲ್ಲಿ ಮಾಡಿಕೊಳ್ಳಲಾಗಿದೆ ಎಂದು ತಿಳಿಸಲು ನನಗೆ ತುಂಬಾ ಸಂತೋಷವೆನಿಸುತ್ತಿದೆ.

ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಸಾಕು ಪ್ರಾಣಿಗಳ ಆರೋಗ್ಯಕ್ಕಾಗಿ ವಿವಿಧ ನಿರ್ವಹಣಾ ಪದ್ಧತಿಗಳ ಮೇಲೆ ಕೇಂದ್ರೀಕರಿಸುವುದಕ್ಕಾಗಿ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಹೊಸ ಪ್ರಾಣಿಗಳ ನಿರ್ವಹಣಾ ಘಟಕವನ್ನು 25 ಆಗಸ್ಟ್, 2023 ರಂದು ಪ್ರಾರಂಭಿಸಲಾಗಿದೆ. ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರು ಇವರು 'ಮಣ್ಣಿನ ಆರೋಗ್ಯ ನಿರ್ವಹಣೆ ಮತ್ತು ಮಣ್ಣಿನ ಮಾದರಿ ಪರೀಕ್ಷೆ' ಕುರಿತು ಹಮ್ಮಿಕೊಳ್ಳಲಾದ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವು ರೈತ ಸಮುದಾಯಕ್ಕೆ ಪ್ರಯೋಜನವನ್ನು ನೀಡಿದೆ.

ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದಲ್ಲಿ 2023–24ನೇ ಸಾಲಿನ 17ನೇ ಅಂತರ ಮಹಾವಿದ್ಯಾಲಯ ಕ್ರೀಡೆಗಳು ಮತ್ತು ಆಟಗಳನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಸುಧಾರಿಸುತ್ತವೆ ಮತ್ತು ಮುಂಬರುವ ವರ್ಷಗಳಲ್ಲಿ ಹೆಚ್ಚಿನ ಮೈಲಿಗಲ್ಲುಗಳನ್ನು ಸಾಧಿಸಲು ವಿದ್ಯಾರ್ಥಿಗಳಿಗೆ ಪ್ರೇರೇಪಿಸುತ್ತವೆ. ನಮ್ಮ ಹಲವಾರು ವಿಜ್ಞಾನಿಗಳು ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಗಳಿಗಾಗಿ ರಾಷ್ಟೀಯ ಮತ್ತು ಅಂತರಾಷ್ಟೀಯ ಮಟ್ಟದ ಪ್ರಶಸ್ತಿಗಳು ಮತ್ತು ಮನ್ನಣೆಗಳನ್ನು ಪಡೆಯುವ ಮೂಲಕ ವಿಶ್ವವಿದ್ಯಾಲಯವನ್ನು ಹೆಮ್ಮೆ ಪಡಿಸಿದ್ದಾರೆ. ಅಂತಿಮವಾಗಿ, ವಾರ್ತಾ ಪತ್ರಿಕೆಯ ಈ ಆವೃತ್ತಿಯನ್ನು ಹೊರತರಲು ವಿಸ್ತರಣಾ ನಿರ್ದೇಶಕರು ಮತ್ತು ಅವರ ತಂಡದವರ ಪ್ರಯತ್ನಗಳನ್ನು ಪ್ರಶಂಸಿಸುತ್ತೇನೆ.

ಸಹಿ
(ಕೆ.ಸಿ. ವೀರಣ್ಣ)
ಕುಲಪತಿಗಳು

## ಸಂಪಾದಕೀಯ ನುಡಿ

ನಮ್ಮ ವಿಶ್ವವಿದ್ಯಾಲಯದ, ಜುಲೈ–ಡಿಸೆಂಬರ್, 2023 ರವರೆಗಿನ ವಾರ್ತಾ ಪತ್ರಿಕೆಯ ಸಂಪುಟ ಸಂಖ್ಯೆ–19 ಮತ್ತು ಸಂಚಿಕೆ–2ನ್ನು ನಿಮ್ಮ ಮುಂದಿಡಲು ನನಗೆ ಬಹಳ ಹರ್ಷವೆನಿಸುತ್ತಿದೆ. ನಮ್ಮ ವಿಶ್ವವಿದ್ಯಾಲಯದ ಶಿಕ್ಷಕರು ಮತ್ತು ಇತರ ಸಿಬ್ಬಂದಿ ಸದಸ್ಯರು, ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳು ಸೇರಿದಂತೆ ಎಲ್ಲಾ ಪ್ರಮುಖ ಘಟನೆಗಳನ್ನು ಒಳಗೊಂಡ ಈ ವಾರ್ತಾ ಪತ್ರಿಕೆ ಹೊರತರಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಲಾಗಿದೆ. ಈ ಅವಧಿಯಲ್ಲಿ ಹಲವಾರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಚಾರ ಸಂಕೀರಣಗಳು, ಸಮ್ಮೇಳನಗಳು, ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಪಶುವೈದ್ಯಕೀಯ ಕ್ಷೇತ್ರ, ಪಶು ವಿಜ್ಞಾನ ಕ್ಷೇತ್ರ, ಹೈನುವಿಜ್ಞಾನ ಕ್ಷೇತ್ರ ಮತ್ತು ಮೀನುಗಾರಿಕೆ ಕ್ಷೇತ್ರಗಳಲ್ಲಿನ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಯನ್ನು ಬಲಪಡಿಸಲು ವಿಶ್ವವಿದ್ಯಾಲಯವು ಅನೇಕ ರಾಷ್ಟ್ರೀಯ ಸಂಸ್ಥೆಗಳೊಂದಿಗೆ ಒಡಂಬಡಿಕೆ ಸಹಿ ಹಾಕಲಾಗಿದೆ. ನಮ್ಮ ಹಲವಾರು ವಿಜ್ಞಾನಿಗಳು ರಾಷ್ಟ್ರೀಯ ಪ್ರಶಸ್ತಿಗಳು ಹಾಗೂ ಮನ್ನಣೆಗಳನ್ನು ಪಡೆಯುವ ಮೂಲಕ ನಮ್ಮ ವಿಶ್ವವಿದ್ಯಾಲಯಕ್ಕೆ ಹೆಮ್ಮೆ ತಂದಿದ್ದಾರೆ.

ಸಹಿ
(ಎನ್.ಎ. ಪಾಟೀಲ)
ಪ್ರಧಾನ ಸಂಪಾದಕರು ಮತ್ತು ವಿಸ್ತರಣಾ ನಿರ್ದೇಶಕರು

## ಪ್ರಮುಖ ಕಾರ್ಯಕ್ರಮಗಳು

### ಭಾಹುರಾವ ದೇಶಪಾಂಡೆ ಪಶುವೈದ್ಯಕೀಯ ಮಹಾವಿದ್ಯಾಲಯ, ಅಥಣಿಯ ಉದ್ಘಾಟನಾ ಸಮಾರಂಭ

ಶ್ರೀ ಭಾಹುರಾವ ದೇಶಪಾಂಡೆ ಪಶುವೈದ್ಯಕೀಯ ಮಹಾವಿದ್ಯಾಲಯ, ಅಥಣಿಯನ್ನು 11ನೇ ಆಗಸ್ಟ್, 2023 ರಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರು ಉದ್ಘಾಟಿಸಿದರು. ಈ ಸಮಯದಲ್ಲಿ ಇವರ ಜೊತೆ ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ. ಕೆ. ಶಿವಕುಮಾರ, ಕಪಪಮೀವಿವಿಯ ಸಹಕುಲಾಧಿಪತಿಗಳು ಮತ್ತು ಸನ್ಮಾನ್ಯ ಪಶು ಹಾಗೂ ರೇಷ್ಮೆ ಇಲಾಖೆಯ ಸಚಿವರಾದ ಶ್ರೀ ವೆಂಕಟೇಶ, ಲೋಕೋಪಯೋಗಿ ಇಲಾಖೆ ಸಚಿವರಾದ ಶ್ರೀ ಸತೀಶ ಜಾರಕಿಹೊಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ, ಅಥಣಿ ಕ್ಷೇತ್ರದ ಶಾಸಕರಾದ ಶ್ರೀ ಲಕ್ಷ್ಮಣ ಸವದಿ ಹಾಗೂ ಸದಸ್ಯರು ಉಪಸ್ಥಿತರಿದ್ದರು. ಅಲ್ಲದೇ, ಕಪಪಮೀವಿವಿಯ ಮಾನ್ಯ ಕುಲಪತಿಗಳಾದ ಕೆ.ಸಿ ವೀರಣ್ಣ ರವರು, ಅಥಣಿ ಮಹಾವಿದ್ಯಾಲಯದ ವಿಶೇಷ ಕರ್ತವ್ಯಾಧಿಕಾರಿಗಳಾದ ಡಾ॥ ಎನ್.ಎ. ಪಾಟೀಲ ಹಾಗೂ ಕಪಪಮೀವಿವಿ ಆಡಳಿತ ಮಂಡಳಿ ಸದಸ್ಯರು ಹಾಗೂ ಇನ್ನಿತರ ಅಧಿಕಾರಿಗಳು ಈ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದರು. ಈ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಹಾವಿದ್ಯಾಲಯದ ಅಭಿವೃದ್ಧಿಗೆ ಬೇಕಾದ ಎಲ್ಲಾ ರೀತಿಯ ಸಹಕಾರವನ್ನು ನೀಡುವುದಾಗಿ ಭರವಸೆ ನೀಡಿದರು.



### ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನ 13ನೇ ಘಟಿಕೋತ್ಸವವು 16ನೇ ಅಕ್ಟೋಬರ್, 2023 ರಂದು ವಿಶ್ವವಿದ್ಯಾಲಯದ ನಂದಿನಗರ ಆವರಣದಲ್ಲಿ ಜರುಗಿತು. ಕರ್ನಾಟಕ ರಾಜ್ಯದ ಘನವೆತ್ತ ರಾಜ್ಯಪಾಲರು ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಗಳು ಸದರಿ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿದರು ಹಾಗೂ ಕರ್ನಾಟಕ ಸರ್ಕಾರದ ಸನ್ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಕೃಷಿ ಸಚಿವರು ಹಾಗೂ ವಿಶ್ವವಿದ್ಯಾಲಯದ ಸಹ–ಕುಲಾಧಿಪತಿಗಳಾದ ಶ್ರೀ. ಕೆ. ವೆಂಕಟೇಶ್ ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ ಇದರ ಉಪ ಮಹಾನಿರ್ದೇಶಕರು (ಶಿಕ್ಷಣ) ಆದ ಡಾ॥ ಆರ್.ಸಿ. ಅಗರವಾಲ್, ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಈ ಘಟಿಕೋತ್ಸವದಲ್ಲಿ ಒಟ್ಟು 837 ವಿದ್ಯಾರ್ಥಿಗಳಿಗೆ ಪದವಿಯನ್ನು ಪ್ರದಾನ ಮಾಡಲಾಗಿದ್ದು, ಇದರಲ್ಲಿ 445 ಸ್ನಾತಕ ಪದವೀಧರರು, 333 ಸ್ನಾತಕೋತ್ತರ ಹಾಗೂ 59 ಡಾಕ್ಟರೇಟ್ ಪದವೀಧರರು ಒಳಗೊಂಡಿದ್ದರು. 2020–21 ಮತ್ತು 2021–22ನೇ ಸಾಲಿನ ಒಟ್ಟು 70 ಪ್ರತಿಭಾನ್ವಿತ ಸ್ನಾತಕ, ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವೀಧರರಿಗೆ ಚಿನ್ನದ ಪದಕಗಳನ್ನು ನೀಡಿ ಗೌರವಿಸಲಾಯಿತು. ಒಟ್ಟು 128 ಚಿನ್ನದ ಪದಕಗಳ ಪೈಕಿ, 45 ಸ್ನಾತಕ, 67 ಸ್ನಾತಕೋತ್ತರ ಹಾಗೂ 16 ಡಾಕ್ಟರೇಟ್ ಪದವಿಗಳ ಚಿನ್ನದ ಪದಕಗಳು ಒಳಗೊಂಡಿರುತ್ತವೆ. ಅದರಲ್ಲಿ 61 ವಿಶ್ವವಿದ್ಯಾಲಯದ ಪದಕಗಳು ಮತ್ತು 67 ಪ್ರಾಯೋಜಿತ ಚಿನ್ನದ ಪದಕಗಳಾಗಿವೆ.




ಹೆಚ್ಚಿನ ಚಿನ್ನದ ಪದಕಗಳನ್ನು ಪಡೆದವರ ಪೈಕಿ, 2021–22ನೇ ಶೈಕ್ಷಣಿಕ ಸಾಲಿಗೆ ಬಿ.ವ್ಹಿ.ಎಸ್‌ಸಿ. & ಎ.ಹೆಚ್. ಸ್ನಾತಕ ಪದವಿಯಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗಿನ ವಿದ್ಯಾರ್ಥಿ ರಾಘವೇಶ, ಎ.ಎನ್. ರವರು 16 ಚಿನ್ನದ ಪದಕಗಳು, ಬಿ.ಟೆಕ್. ಸ್ನಾತಕ ಪದವಿಯಲ್ಲಿ ಹೈನು ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರಿನ ಸುರೇಶ ಬಾಬು, ಸಿ.ಎಸ್. ರವರು 4 ಚಿನ್ನದ ಪದಕಗಳು ಮತ್ತು ಬಿ.ಎಫ್.ಎಸ್‌ಸಿ. ಸ್ನಾತಕ ಪದವಿಯಲ್ಲಿ ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರಿನ ಹೇಮಶ್ರೀ ಗೌಡ ರವರು 3 ಚಿನ್ನದ ಪದಕಗಳನ್ನು ಪಡೆದರು.



## ಆಯೋಜಿತ ತರಬೇತಿಗಳು/ಕಾರ್ಯಾಗಾರಗಳು/ ಸಮಾವೇಶಗಳು/ವಿಚಾರ ಸಂಕೀರಣಗಳು/ಪ್ರದರ್ಶನಗಳು/ ಪಶು ಆರೋಗ್ಯ ಶಿಬಿರಗಳು / ಕ್ಷೇತ್ರ ದಿನಗಳು:

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

- ಮಹಾವಿದ್ಯಾಲಯದ ವಿಸ್ತರಣಾ ಶಿಕ್ಷಣ ಕೇಂದ್ರವು ಯಶ್ ಲೋಕ ಸಂಘಟನೆಯ ಸಹಯೋಗದಲ್ಲಿ 16ನೇ ಆಗಸ್ಟ, 2023 ರಂದು ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ತರಬೇತಿ ಕಾರ್ಯಕ್ರಮದಲ್ಲಿ ಕರ್ನಾಟಕದ ನಾನಾ ಭಾಗಗಳಿಂದ ಸುಮಾರು 50 ರೈತರು ಭಾಗವಹಿಸಿದ್ದರು.

- ಕಪಪಮೀವಿವಿಯ ಬೆಂಗಳೂರಿನ ಪ್ರಾದೇಶಿಕ ಆವರಣದ ಸಿಬ್ಬಂದಿ ತರಬೇತಿ ಘಟಕದಲ್ಲಿ 8ನೇ ಮತ್ತು 9ನೇ ಸೆಪ್ಟೆಂಬರ್, 2023 ರಂದು ಎರಡು ದಿನಗಳ ಬೋಧಕ ಸಿಬ್ಬಂದಿಯವರ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ "ಶಿಕ್ಷಣದ ಡಿಜಿಟಲೀಕರಣದ ಹಿನ್ನಲೆಯಲ್ಲಿ ಬೋಧನಾ ಕೌಶಲ್ಯಗಳನ್ನು ಹೆಚ್ಚಿಸುವ" ಬಗ್ಗೆ ತರಬೇತಿಯನ್ನು ಆಯೋಜಿಸಲಾಗಿತ್ತು. ಬೆಂಗಳೂರು ಪಶುವೈದ್ಯಕೀಯ ಮಹಾವಿದ್ಯಾಲಯ ಹಾಗೂ ಹೈನು ವಿಜ್ಞಾನ ಮಹಾವಿದ್ಯಾಲಯದ 28 ಬೋಧಕ ಸಿಬ್ಬಂದಿ ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.




- ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿನ ವಿಸ್ತರಣಾ ಶಿಕ್ಷಣ ಕೇಂದ್ರವು, ತುಮಕೂರು ಜಿಲ್ಲೆ ಪಾವಗಡ ತಾಲೂಕಿನ ಲಿಂಗದಹಳ್ಳಿಯಲ್ಲಿ 'ಬೆಳಕು ಕುರಿ ಮತ್ತು ಉಣ್ಣೆ ಅಭಿವೃದ್ಧಿ ಸಹಕಾರ ಸಂಘದ ಸಹಯೋಗದಲ್ಲಿ 23ನೇ, ನವೆಂಬರ, 2023 ರಂದು ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ ಕುರಿತು ರೈತರ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತು.




- ಬೆಂಗಳೂರಿನ ಸಿಲಿಕಾನ್ ಸಿಟಿ ಕೆನಲ್ ಕ್ಲಬ್‌ನ 127ನೇ ಮತ್ತು 128ನೇ ಚಾಂಪಿಯನ್‌ಶಿಪ್ ಶ್ವಾನ ಪ್ರದರ್ಶನ ಮತ್ತು ಬೆಂಗಳೂರಿನ ಕೆನೈನ್ ಕ್ಲಬ್‌ನ ಸಹಯೋಗದೊಂದಿಗೆ 55 ಮತ್ತು 56ನೇ ಚಾಂಪಿಯನ್‌ಶಿಪ್ ಶ್ವಾನ ಪ್ರದರ್ಶನವನ್ನು 2 ಮತ್ತು 3ನೇ ಡಿಸೆಂಬರ್, 2023 ರಂದು ಪಶುವೈದ್ಯಕೀಯ ಮಹಾವಿದ್ಯಾಲಯ ಬೆಂಗಳೂರಿನ, ಆವರಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಗೌರವಾನ್ವಿತ ಕುಲಪತಿಗಳು, ಪ್ರೊ. ಕೆ. ಸಿ. ವೀರಣ್ಣ, ಕಪಪಮೀವಿವಿ, ಬೀದರ ರವರು ಉದ್ಘಾಟಿಸಿದರು.
- ಬೆಂಗಳೂರಿನ ಪಶುವೈದ್ಯಕೀಯ ಸೂಕ್ಷ್ಮಜೀವಾಣುಶಾಸ್ತ್ರ ವಿಭಾಗದ ಕಪಪಮೀವಿವಿ-ಸಿವಿಎ-ರೇಬೀಸ್ ರೋಗನಿರ್ಣಯ ಪ್ರಯೋಗಾಲಯವು ಕಾಮನ್‌ವೇಲ್ತ್ ಪಶುವೈದ್ಯಕೀಯ ಸಂಘದ ಸಹಯೋಗದೊಂದಿಗೆ 19 ರಿಂದ 22ನೇ ಡಿಸೆಂಬರ್, 2023 ರವರೆಗೆ "ಪ್ರಾಣಿಗಳಲ್ಲಿ ಮೆದುಳಿನ ಮಾದರಿ ಸಂಗ್ರಹಣೆ ಹಾಗೂ ರೇಬೀಸ್ ರೋಗ ನಿರ್ಣಯ ಪ್ರಾತ್ಯಕ್ಷತೆ"ಯ ಕುರಿತು ಅಂತರರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಿತು.



**ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ**

- 25ನೇ ಆಗಸ್ಟ್, 2023 ರಂದು ಉದ್ಯಮ ಶೀಲತಾ ಕಾರ್ಯಕ್ರಮದ ಅಡಿಯಲ್ಲಿ ಮುದ್ದು ಪ್ರಾಣಿ ಆರೈಕೆ ಕೇಂದ್ರವನ್ನು ಪ್ರಾರಂಭಿಸಲಾಯಿತು. ಮುದ್ದು ಪ್ರಾಣಿಗಳ ಆರೋಗ್ಯಕ್ಕಾಗಿ ವಿವಿಧ ಅಂಶಗಳ ಮೇಲೆ ಕೇಂದ್ರೀಕರಿಸುವುದು ಈ ಘಟಕದ ಮುಖ್ಯ ಉದ್ದೇಶವಾಗಿದ್ದು, ರೋಗ ನಿರೋಧಕ ಲಸಿಕೆ ಮತ್ತು ರೋಗ ನಿರ್ಣಯ ಪರೀಕ್ಷೆಗಳಂತಹ ವಿವಿಧ ಸೇವೆಗಳು ಲಭ್ಯವಿರುತ್ತವೆ.



**ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ**

- ವಿಸ್ತರಣಾ ಶಿಕ್ಷಣ ಕೇಂದ್ರ, ಶಿವಮೊಗ್ಗ ಇವರ ವತಿಯಿಂದ ರೈತರಿಗೆ ಎರಡು ದಿನಗಳ "ವೈಜ್ಞಾನಿಕ ಕೋಳಿ ಸಾಕಾಣಿಕೆ ತರಬೇತಿ" ಕಾರ್ಯಕ್ರಮವನ್ನು 8 ರಿಂದ 9ನೇ ಡಿಸೆಂಬರ್, 2023 ರವರೆಗೆ ಆಯೋಜಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ 42 ಜನ ರೈತರು ಭಾಗವಹಿಸಿ ತರಬೇತಿ ಬಗ್ಗೆ ಮಾಹಿತಿಯನ್ನು ಪಡೆದರು.



### ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

- ಅಕ್ಟೋಬರ್ 17 ಮತ್ತು 18ನೇ, 2023 ರಂದು ವಿಸ್ತರಣಾ ಶಿಕ್ಷಣ ಕೇಂದ್ರ, ಹಾಸನ ವತಿಯಿಂದ "ವೈಜ್ಞಾನಿಕ ಹಿತ್ತಲ ಕೋಳಿ ಸಾಕಾಣಿಕೆ ಹಾಗೂ ಮಾದರಿಗಳ ಸ್ಥಾಪನೆ" ಕುರಿತು ರೈತರಿಗೆ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 25 ರೈತರು ಭಾಗವಹಿಸಿದ್ದರು. ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗೆ ತರಬೇತಿ ಕೈಪಿಡಿ ಹಾಗೂ ಕೋಳಿ ಮರಿಗಳನ್ನು ವಿತರಿಸಲಾಯಿತು.



- ಪಿಜಿಎಸ್-ಭಾರತ ಸಹಯೋಗದೊಂದಿಗೆ ಕೃಷಿ, ಪಶು ಸಂಗೋಪನೆ, ಸಂಸ್ಕರಣೆ ಮತ್ತು ನಿರ್ವಹಣೆಯಲ್ಲಿ ಸಾವಯವ ಪ್ರಮಾಣೀಕರಣಗಳ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳ ಕುರಿತು ತರಬೇತಿ ಕಾರ್ಯಕ್ರಮವನ್ನು 3ನೇ ಆಗಸ್ಟ್, 2023 ರಂದು ಆಯೋಜಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಸಾವಯವ ಪ್ರಮಾಣೀಕರಣದ ಬಗ್ಗೆ ಮಾಹಿತಿ ನೀಡಲಾಯಿತು.
- ಕರ್ನಾಟಕ ಹಾಲು ಒಕ್ಕೂಟ, ಹಾಸನ ಮತ್ತು ಮೈಸೂರು ತರಬೇತಿ ಕೇಂದ್ರದ ಸಹಯೋಗದೊಂದಿಗೆ 12 ರಿಂದ 14ನೇ ಜುಲೈ, 2023 ರವರೆಗೆ "ಹೈನುರಾಸುಗಳ ನಿರ್ವಹಣೆ" ಕುರಿತು ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ

- ಗದಗ ತಾಲೂಕಿನ ಹರ್ಲಾಪೂರ ಗ್ರಾಮದಲ್ಲಿ 11 ರಿಂದ 12ನೇ ಅಕ್ಟೋಬರ್, 2023 ರವರೆಗೆ ಪಶುಪಾಲಕ ರೈತರಿಗೆ ಮತ್ತು ಆಸಕ್ತ ಯುವಕ-ಯುವತಿಯರಿಗೆ "ಪಶುಪಾಲನೆಯಲ್ಲಿ ಉದ್ಯಮಶೀಲತೆ" ಎಂಬ ವಿಷಯದ ಕುರಿತು ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಹರ್ಲಾಪೂರ ಹಾಗೂ ಸುತ್ತಮುತ್ತಲಿನ ಗ್ರಾಮಗಳ 50ಕ್ಕೂ ಹೆಚ್ಚು ರೈತರು ತರಬೇತಿಯಲ್ಲಿ ಭಾಗವಹಿಸಿದ್ದರು.



- ರಾಷ್ಟ್ರೀಯ ಮೊಟ್ಟೆ ಸಹಯೋಗ ಸಂಸ್ಥೆಯ (ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿ) ಸಹಯೋಗದಲ್ಲಿ 6ನೇ ನವಂಬರ್, 2023 ರಂದು "ಕುಕ್ಕುಟ ಘಟಕಗಳಲ್ಲಿ ಜೈವಿಕ ಸುರಕ್ಷತೆ ಮತ್ತು ಪ್ರಮುಖ ರೋಗಗಳು" ವಿಷಯದ ಕುರಿತು ಕಾರ್ಯಾಗಾರ ಏರ್ಪಡಿಸಲಾಗಿತ್ತು.

### ಹೈನುಗಾರಿಕೆ ಮಹಾವಿದ್ಯಾಲಯ, ಬೆಂಗಳೂರು

- "ಅಪೇಕ್ಷಿತ ಸುವಾಸನೆ ಮತ್ತು ವಿನ್ಯಾಸದೊಂದಿಗೆ ತುಪ್ಪದ ಉತ್ಪಾದನೆಯಲ್ಲಿ ತಾಂತ್ರಿಕ ಮಧ್ಯಸ್ಥಿಕೆಗಳು" ಎಂಬ ರಾಷ್ಟ್ರೀಯ ಕಾರ್ಯಾಗಾರವನ್ನು 14ನೇ ಜುಲೈ, 2023 ರಂದು ಆಯೋಜಿಸಲಾಯಿತು.




### ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು

- ಮೀನು ಸಂಸ್ಕರಣಾ ತಾಂತ್ರಿಕ ವಿಭಾಗದಲ್ಲಿ ನಾವಿಕ್ ಅಗ್ರಿ ಬಿಸಿನೆಸ್ ಇನ್ಕ್ಯುಬೇಶನ್ ಸೆಂಟರ್, ಬೆಂಗಳೂರು ಇವರ ಸಹಯೋಗದೊಂದಿಗೆ 7 ರಿಂದ 8ನೇ ಆಗಸ್ಟ್, 2023 ರವರೆಗೆ "ಮೌಲ್ಯವರ್ಧಿತ ಮೀನು ಉತ್ಪನ್ನಗಳಲ್ಲಿ ಉದ್ಯಮಶೀಲತೆಯ ಅವಕಾಶಗಳು" ಕುರಿತು ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



- ಮೀನುಗಾರಿಕಾ ವಲಯದಲ್ಲಿ ಸುಸ್ಥಿರ ಪದ್ಧತಿಗಳನ್ನು ಹಾಗೂ ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಜಲಕೃಷಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಮಹಾವಿದ್ಯಾಲಯವು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ್ ಇವರ ಸಹಯೋಗದೊಂದಿಗೆ "ಕರಾವಳಿ ಪ್ರದೇಶದಲ್ಲಿ ಅಲಂಕಾರಿಕ ಮೀನು ಕೃಷಿ" ಎಂಬ ವಿಷಯದ ಕುರಿತು ಮೂರು ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು 25 ರಿಂದ 27ನೇ ಸೆಪ್ಟೆಂಬರ್, 2023ರ ವರೆಗೆ ಆಯೋಜಿಸಲಾಗಿತ್ತು.

- ಮೀನು ಸಂಸ್ಕರಣಾ ತಾಂತ್ರಿಕ ವಿಭಾಗದಲ್ಲಿ 3 ರಿಂದ 12ನೇ ಅಕ್ಟೋಬರ್, 2023 ರವರೆಗೆ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು

ಹಾಗೂ ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ ಇವರ ಸಹಯೋಗದೊಂದಿಗೆ ಪ್ರಗತಿಪರ ಮೀನು ಸಂಸ್ಕರಣಾಕಾರರಿಗೆ ಉದ್ಯಮಶೀಲತೆ ಅಭಿವೃದ್ಧಿ ಕುರಿತು 10 ದಿನಗಳ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

- ಶ್ರೀಮತಿ. ಯಶಸ್ವಿ ಫಿಶ್ ಮೀಲ್ ಮತ್ತು ಆಯಿಲ್ ಕಂಪನಿ, ಪಿತ್ರೋಡಿ, ಉಡುಪಿ ಇವರು ಆಯೋಜಿಸಿದ್ದ ವಿಶ್ವ ಆಹಾರ ದಿನ –2023 "ಆಹಾರ ಭದ್ರತೆಯಲ್ಲಿ ನಾವೀನ್ಯತೆಗಳನ್ನು ಅನ್ವೇಷಿಸುವ ಮೂಲಕ ಭವಿಷ್ಯಕ್ಕಾಗಿ ಮೀನು ಮತ್ತು ಮೀನುಗಾರಿಕೆ ಉತ್ಪನ್ನಗಳನ್ನು ಪೋಷಿಸುವುದು" ಎಂಬ ವಿಷಯದ ಕುರಿತು ತಾಂತ್ರಿಕ ಕಾರ್ಯಾಗಾರವನ್ನು 5ನೇ ಡಿಸೆಂಬರ್, 2023 ರಂದು ಮೀನು ಸಂಸ್ಕರಣಾ ತಾಂತ್ರಿಕ ವಿಭಾಗದಲ್ಲಿ ಆಯೋಜಿಸಲಾಯಿತು.
- ಮೀನು ಸಂಸ್ಕರಣಾ ತಾಂತ್ರಿಕ ವಿಭಾಗದಲ್ಲಿ 18ನೇ ಡಿಸೆಂಬರ್, 2023 ರಂದು ಲಯನ್ಸ್ ಕ್ಲಬ್, ಮಂಗಳೂರು ಇವರ ಸಹಯೋಗದಲ್ಲಿ "ಉದ್ಯಮಶೀಲ ಅವಕಾಶಗಳ ಮೂಲಕ ಮಹಿಳೆಯರ ಸಬಲೀಕರಣ" ಕುರಿತು ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



### ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಬೆಂಗಳೂರು

- ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ 11 ರಿಂದ 13ನೇ ಜುಲೈ, 2023ರ ಅವಧಿಯಲ್ಲಿ "ಪ್ರೋಬ್ಯಾಂಗ್/ ಓರೋ–ಫಾರಂಜಿಯಲ್ ದ್ರವ ಸಂಗ್ರಹಣೆ, ರವಾನೆ ಮತ್ತು ಎಫ್ ಎಂ ಡಿ–ಎನ್ ಎಸ್ ಪಿ ರಿಯಾಕ್ಟರ್‌ಗಳ ಅನುಸರಣೆಯ ತರಬೇತಿಯನ್ನು ಆಯೋಜಿಸಲಾಗಿತ್ತು.



- ಲಸಿಕೆ ಜಾಗೃತಿ ಶಿಬಿರವನ್ನು ಕೋಲಾರ ಜಿಲ್ಲೆಯ ವೇಮಗಲ್‌ನಲ್ಲಿ 27ನೇ ಸೆಪ್ಟೆಂಬರ್, 2023 ರಂದು ಆಯೋಜಿಸಲಾಗಿತ್ತು.

- "ಕ್ಷಯರೋಗ ಮತ್ತು ಆನೆ ಹರ್ಪಿಸ್ ವೈರಸ್‌ನ ಮಾದರಿ ಸಂಗ್ರಹಣೆ ಮತ್ತು ರೋಗ ನಿರ್ಣಯ" ಕುರಿತು ತರಬೇತಿ ಕಾರ್ಯಕ್ರಮವನ್ನು 4ನೇ ಆಗಸ್ಟ್, 2023 ರಂದು ಕೇರಳದ ಕೊಟ್ಟೂರಿನ ಆನೆ ಪುನರ್ವಸತಿ ಕೇಂದ್ರದಲ್ಲಿ ಆಯೋಜಿಸಲಾಗಿತ್ತು.



### ವನ್ಯಜೀವಿ ಪಶುವೈದ್ಯಕೀಯ ಸಂಶೋಧನಾ ಕೇಂದ್ರ, ಕೊಡಗು

- ಕೊಡಗು ಜಿಲ್ಲೆಯ ರೈತರಿಗೆ 3 ಮತ್ತು 4ನೇ, ಅಕ್ಟೋಬರ್, 2023 ರಂದು "ವನ್ಯಜೀವಿ ಬೇಟೆಯನ್ನು ತಡೆಗಟ್ಟುವ ಕ್ರಮಗಳು ಮತ್ತು ಪಶುಸಂಗೋಪನೆಯಲ್ಲಿ ಸುಧಾರಿತ ತಂತ್ರಜ್ಞಾನಗಳ ಅಳವಡಿಕೆ" ಕುರಿತು ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

### ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ, ಬೀದರ

- ವೈಜ್ಞಾನಿಕ ಹೈನುಗಾರಿಕೆ ತರಬೇತಿ ಕಾರ್ಯಕ್ರಮವನ್ನು ರಿಲಾಯನ್ಸ ಫೌಂಡೇಶನ ಸಹಯೋಗದೊಂದಿಗೆ ಸಂಬಂಧಪಟ್ಟ ಸರ್ಕಾರೇತರ ಸಂಸ್ಥೆಗಳ ಮುಖ್ಯಸ್ಥರು /ಸಿಬ್ಬಂದಿ ವರ್ಗ (ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣಾ ರಾಜ್ಯಗಳು) ರವರಿಗೆ 17ನೇ ನವೆಂಬರ, 2023 ರಂದು ಆಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 40 ಜನ ರಿಲಾಯನ್ಸ್ ಫೌಂಡೇಶನ ಅಧಿಕಾರಿಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಮುಖ್ಯಸ್ಥರು /ಸಿಬ್ಬಂದಿ ವರ್ಗದವರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.



### ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ನಾಗಮಂಗಲ

- 3 ರಿಂದ 5ನೇ ಆಗಸ್ಟ್, 2023 ವರೆಗೆ ನ್ಯಾಷನಲ್ ಲೈವ್‌ಸ್ಟಾಕ್ ಮಿಷನ್(ರಾಷ್ಟ್ರೀಯ ಜಾನುವಾರು ಮಿಷನ್) ಯೋಜನೆಯಡಿ ಸೌಲಭ್ಯ ಪಡೆಯಲು ಇಚ್ಛಿಸುವ ರೈತರಿಗಾಗಿ ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ ಬಗ್ಗೆ ಮೂರು ದಿನಗಳ ತರಬೇತಿಯನ್ನು ಆಯೋಜಿಸಲಾಗಿತ್ತು.



### ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ–ವಿಜಯಪುರ

- 12ನೇ ಜುಲೈ, 2023 ರಂದು "ಮಣ್ಣು ಮತ್ತು ನೀರಿನ ಗುಣಧರ್ಮಗಳು" ಎಂಬ ಒಂದು ದಿನದ ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.
- 25ನೇ ಜುಲೈ, 2023 ರಂದು "ಸಿಹಿನೀರಿನ ಅಲಂಕಾರಿಕ ಮೀನು ಸಾಕಣೆ" ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



- ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಭಾರತ ಸರ್ಕಾರ, ಹೈದರಾಬಾದ್ ರವರ ಪ್ರಾಯೋಜಕತ್ವದಲ್ಲಿ 10ನೇ ಜುಲೈ, 2023 ರಂದು "ಮಿಶ್ರ ಮೀನು ಸಾಕಾಣಿಕೆ", 11 ರಿಂದ 13ನೇ ಜುಲೈ, 2023 ರವರೆಗೆ "ಸಿಹಿ ನೀರು ಅಲಂಕಾರಿಕ ಮೀನು ಸಾಕಾಣಿಕೆ", 11ನೇ ಸೆಪ್ಟೆಂಬರ್, 2023 ರಂದು "ಮಣ್ಣು ಮತ್ತು ನೀರಿನ ಗುಣಧರ್ಮಗಳು", 14 ರಿಂದ 16ನೇ ಸೆಪ್ಟೆಂಬರ್, 2023 ರವರೆಗೆ "ಬಯೋಫ್ಲಾಕ್ ಪದ್ಧತಿಯಲ್ಲಿ ಮೀನು ಸಾಕಾಣಿಕೆ", 19ನೇ ಸೆಪ್ಟೆಂಬರ್, 2023 ರಂದು "ಸಿಹಿ ನೀರು ಅಲಂಕಾರಿಕ ಮೀನು ಸಾಕಾಣಿಕೆ", 20ನೇ ಸೆಪ್ಟೆಂಬರ್, 2023 ರಂದು "ಬಯೋಫ್ಲಾಕ್ ಪದ್ಧತಿಯಲ್ಲಿ ಮೀನು ಸಾಕಾಣಿಕೆ" ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.



### ಮೀನುಗಾರಿಕಾ ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಹೆಬ್ಬಾಳ, ಬೆಂಗಳೂರು

- ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ್ ಪ್ರಾಯೋಜಕತ್ವದಲ್ಲಿ ಮೀನಿನ ಮೌಲ್ಯವರ್ಧನೆಯಲ್ಲಿ ಮಹಿಳೆಯರ ಸಬಲೀಕರಣ ವಿಷಯವಾಗಿ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಮಹಿಳೆಯರಿಗಾಗಿ 18 ರಿಂದ 20ನೇ ಜುಲೈ, 2023ರ ವರೆಗೆ ಆಯೋಜಿಸಲಾಗಿತ್ತು. ಕರ್ನಾಟಕದ ಹಲವಾರು ಜಿಲ್ಲೆಗಳಿಂದ ಆಗಮಿಸಿದ 50 ಮಹಿಳಾ ಶಿಬಿರಾರ್ಥಿಗಳು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮೀನಿನ ಮೌಲ್ಯವರ್ಧನೆಯ ಉತ್ಪನ್ನಗಳ ತಯಾರಿಕೆಯಲ್ಲಿ ಮಾಹಿತಿಯನ್ನು ಪಡೆದರು.



- ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ್ ಪ್ರಾಯೋಜಕತ್ವದಲ್ಲಿ "ಅಲಂಕಾರಿಕ ಮೀನು ಕೃಷಿಯ ಮೂಲಕ ನಿರುದ್ಯೋಗಿ ಯುವಕರ ಸಬಲೀಕರಣ" ವಿಷಯವಾಗಿ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು 4 ರಿಂದ 6ನೇ ಅಕ್ಟೋಬರ್, 2023ರ ವರೆಗೆ ಆಯೋಜಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ 50 ಕೃಷಿಕರು, ಆಸಕ್ತ ಯುವಕರು, ನಿರುದ್ಯೋಗಿ ಯುವಕರು ಪಾಲ್ಗೊಂಡು ಅಲಂಕಾರಿಕ ಮೀನು ಕೃಷಿಯ ಕುರಿತಾದ ವಿಷಯದ ಬಗ್ಗೆ ತಿಳಿದುಕೊಂಡರು.



- "ಭಾರತೀಯ ಗೆಂಡೆ ಮೀನು ಮರಿಗಳ ಉತ್ಪಾದನೆ ಮತ್ತು ಪಾಲನೆ" ವಿಷಯವಾಗಿ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ ಪ್ರಾಯೋಜಕತ್ವದಲ್ಲಿ 17 ರಿಂದ 19ನೇ, ಅಕ್ಟೋಬರ್, 2023ರವರೆಗೆ ಆಯೋಜಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಹಲವು ಜಿಲ್ಲೆಗಳಿಂದ ಪಾಲ್ಗೊಂಡ 50 ಕೃಷಿಕರಿಗೆ ತರಬೇತಿಯನ್ನು ನೀಡಲಾಯಿತು.



- "ಭಾರತೀಯ ಗೆಂಡೆ ಮೀನು ಮರಿಗಳ ನರ್ಸರಿ ಮತ್ತು ಪಾಲನೆ" ವಿಷಯವಾಗಿ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ ಪ್ರಾಯೋಜಕತ್ವದಲ್ಲಿ 27 ರಿಂದ 29ನೇ ಅಕ್ಟೋಬರ್, 2023ರ ವರೆಗೆ ಆಯೋಜಿಸ-ಲಾಯಿತು. ಭಾರತೀಯ ಗೆಂಡೆ ಮೀನುಮರಿಗಳ ನರ್ಸರಿ ಮತ್ತು ಪಾಲನೆ ಕುರಿತಾಗಿ ರಾಜ್ಯದ ಹಲವು ಜಿಲ್ಲೆಗಳಿಂದ ಪಾಲ್ಗೊಂಡ 50 ಕೃಷಿಕರಿಗೆ ತರಬೇತಿಯನ್ನು ನೀಡಲಾಯಿತು.

## ಮೀನುಗಾರಿಕಾ ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಹೆಸರಘಟ್ಟ, ಬೆಂಗಳೂರು

- ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ ಪ್ರಾಯೋಜಕತ್ವದಲ್ಲಿ "ಅಲಂಕಾರಿಕ ಮೀನು ಕೃಷಿಯ ಮೂಲಕ ನಿರುದ್ಯೋಗಿ ಯುವಕರ ಸಬಲೀಕರಣ" ವಿಷಯವಾಗಿ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು 20 ರಿಂದ 22ನೇ ಜುಲೈ 2023, ವರೆಗೆ ಆಯೋಜಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ 50 ಕೃಷಿಕರು ಮತ್ತು ಆಸಕ್ತ ನಿರುದ್ಯೋಗಿ ಯುವಕರು ಭಾಗವಹಿಸಿದರು.



- "ಭಾರತೀಯ ಗೆಂಡೆ ಮೀನು ಮರಿಗಳ ಉತ್ಪಾದನೆ ಮತ್ತು ಪಾಲನೆ" ವಿಷಯವಾಗಿ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ ಪ್ರಾಯೋಜಕತ್ವದಲ್ಲಿ 25 ರಿಂದ 27ನೇ ಸೆಪ್ಟಂಬರ್, 2023, ವರೆಗೆ ಆಯೋಜಿಸಲಾಯಿತು.



## ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ

- 19ನೇ ಜುಲೈ, 2023 ರಂದು ಸಸ್ಯ ಸಂರಕ್ಷಣಾ ಸಾಧನಗಳು ಮತ್ತು ಕೀಟ ನಾಶಕಗಳ ಸುರಕ್ಷಿತ ಬಳಕೆಯ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆನ್‌ಲೈನ್ ವಿಧಾನದ ಮೂಲಕ ಆಯೋಜಿಸಲಾಯಿತು. ಕೇಂದ್ರದ ವಿಜ್ಞಾನಿಗಳು, ಸಿಬ್ಬಂದಿ ಮತ್ತು ಒಟ್ಟು 36 ದೇಸಿ ಕೃಷಿ ಪರಿಕರ ಮಾರಾಟಗಾರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

- 27ನೇ ಜುಲೈ, 2023 ರಂದು ಪ್ರಧಾನ ಮಂತ್ರಿಗಳ ಕಿಸಾನ್ ಸಮ್ಮೇಳನದ ನೇರ ಪ್ರಸಾರ ಕಾರ್ಯಕ್ರಮದ ಸಂದರ್ಭದಲ್ಲಿ "ಭತ್ತ ಮತ್ತು ಅಡಿಕೆಯ ಪೋಷಕಾಂಶಗಳ ನಿರ್ವಹಣೆ" ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಪುಣಚ ಗ್ರಾಮ ಪಂಚಾಯತ್ ಸಹಯೋಗದಲ್ಲಿ ಆಯೋಜಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ 42 ಕೃಷಿಕರು / ಕೃಷಿ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

- 2ನೇ ಆಗಸ್ಟ್, 2023 ರಂದು ವಿಶ್ವವಿದಾಲಯದ ವಿದ್ಯಾರ್ಥಿಗಳಿಗೆ ಕೃಷಿ ವಿಜ್ಞಾನ ಕೇಂದ್ರದ ಕ್ಷೇತ್ರದಲ್ಲಿ ಯಾಂತ್ರಿಕೃತ ಭತ್ತದ ನಾಟಿ ಹಾಗೂ ಕೈಯಿಂದ ಭತ್ತದ ಸಸಿಗಳನ್ನು ನಾಟಿ ಮಾಡುವ ವಿಧಾನದ ಪದ್ದತಿ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಗಿತ್ತು. ಮಂಗಳೂರು ವಿಶ್ವವಿದಾಲಯದ 45 ರಾಷ್ಟ್ರೀಯ ಸ್ವಯಂ ಸೇವೆ ಯೋಜನೆಯ (ಎನ್.ಎಸ್.ಎಸ್.) ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



- 3ನೇ ಆಗಸ್ಟ್, 2023 ರಂದು ಮೂಡುಬಿದರೆ ತಾಲೂಕಿನ ಕೆಲ್ಲಪುತ್ತಿಗೆ ಗ್ರಾಮದಲ್ಲಿ ಭತ್ತದಲ್ಲಿ ಸಮಗ್ರ ರೋಗ ನಿರ್ವಹಣೆ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಆತ್ಮ ಯೋಜನೆಯ ಅಧಿಕಾರಿಗಳು ಮತ್ತು 13 ಜನ ರೈತರು ಭಾಗವಹಿಸಿದ್ದರು.
- 7ನೇ ಆಗಸ್ಟ್, 2023 ರಂದು ಉಳ್ಳಾಲ ತಾಲೂಕಿನ ಅಂಬ್ಲ ಮೊಗರು ಗ್ರಾಮದಲ್ಲಿ ಹತ್ತು ರೈತರ ಕ್ಷೇತ್ರಗಳಲ್ಲಿ "ಕರಾವಳಿಯ ಭತ್ತದಲ್ಲಿ ಪೊಟ್ಯಾಸಿಯಮ್ ನಿರ್ವಹಣೆ' ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲಾಯಿತು.
- 19ನೇ ಆಗಸ್ಟ್, 2023 ರಂದು "ಮಣ್ಣಿನ ಆರೋಗ್ಯ ಮತ್ತು ಮಣ್ಣಿನ ಮಾದರಿ ಪರೀಕ್ಷೆಯ ನಿರ್ವಹಣೆ" ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಕೃಷಿ ವಿಚಾರ ವಿನಿಮಯ ಕೇಂದ್ರ, ಮೂಡಬಿದಿರೆಯಲ್ಲಿ ಅಯೋಜಿಸಲಾಗಿತು. ಸದರಿ ಕಾರ್ಯಕ್ರಮದಲ್ಲಿ 40 ಕೃಷಿಕರು/ಕೃಷಿ ಮಹಿಳೆಯರು ಕಾರ್ಯಕ್ರಮದ ಪ್ರಯೋಜನ ಪಡೆದರು.
- 26ನೇ ಆಗಸ್ಟ್, 2023 ರಂದು ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ತರಕಾರಿ ಬೆಳೆಗಳ ಸುಧಾರಿತ ಉತ್ಪಾದನಾ ತಂತ್ರಜ್ಞಾನದ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಪುತ್ತೂರಿನ ಸವಣೂರಿನಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ 56 ಕೃಷಿಕರು/ಕೃಷಿ ಮಹಿಳಾ ಮತ್ತು ವಿಸ್ತರಣಾಧಿಕಾರಿಗಳು ಭಾಗವಹಿಸಿದ್ದರು.
- 5ನೇ ಸಪ್ಟೆಂಬರ್, 2023 ರಂದು ಸಸ್ಯ ಪೋಷಣೆ ನಿರ್ವಹಣೆಯ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿ, 90 ರೈತರು ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.



- 8ನೇ ಸಪ್ಟೆಂಬರ್, 2023 ರಂದು ಐ.ಸಿ.ಎ.ಆರ್–ಗೇರು ಸಂಶೋಧನಾ ನಿರ್ದೇಶನಾಲಯ, ಪುತ್ತೂರಿನಲ್ಲಿ ಸಮಗ್ರ ಕೃಷಿ ಪದ್ಧತಿ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು ಕೃಷಿ ವಿಜ್ಞಾನ ಕೇಂದ್ರ ಸಿಬ್ಬಂದಿ ವರ್ಗ, 40 ರೈತರು ಹಾಗೂ ರೈತ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
- 5ನೇ ಸಪ್ಟೆಂಬರ್, 2023 ರಂದು ಪರಿಶಿಷ್ಟ ಜಾತಿ ಉಪಯೋಜನೆಯ ಕಾರ್ಯಕ್ರಮದಡಿ ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ಜಾತಿಯ ರೈತರಿಗೆ ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ




ಮತ್ತು 8ನೇ ಸಪ್ಟೆಂಬರ್, 2023 ರಂದು ಐ.ಸಿ.ಎ.ಆರ್–ಗೇರು ಸಂಶೋಧನಾ ನಿರ್ದೇಶನಾಲಯ, ಪುತ್ತೂರಿನಲ್ಲಿ 100 ಟಾರ್ಪಲಿನ್ ಮತ್ತು 39 ಸೋಲಾರ್ ದೀಪಗಳನ್ನು ವಿತರಿಸಲಾಯಿತು. ಕೇಂದ್ರದ ಸಿಬ್ಬಂದಿಗಳು, 139 ರೈತರು ಮತ್ತು ರೈತ ಮಹಿಳೆಯರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

## ಪ್ರಶಸ್ತಿಗಳು/ಮನ್ನಣೆಗಳು

### ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಹೆಬ್ಬಾಳ

- 17 ರಿಂದ 20ನೇ ನವೆಂಬರ್ 2023ರವರೆಗೆ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾದ ಕೃಷಿ ಮೇಳದಲ್ಲಿ 'ಪ್ರಾಣಿ ವಿಜ್ಞಾನ ವಿಭಾಗವು' ರೈತರಿಗೆ ಸಹಕಾರಿಯಾಗುವ ಜೈವಿಕ ಫ್ಲೋಕ್, ಅಕ್ವಾಪೋನಿಕ್ಸ್, ಮರುಪರಿಚಲನಾ ಜಲಕೃಷಿ ವ್ಯವಸ್ಥೆಯ ತಂತ್ರಜ್ಞಾನ ಮಾದರಿಗಳನ್ನು ಪ್ರದರ್ಶಿಸಿದ್ದಕ್ಕಾಗಿ ಪ್ರಶಸ್ತಿ ನೀಡಲಾಯಿತು.




### ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ–ಮಂಗಳೂರು.

- ನಾಲ್ಕು ದಶಕಗಳಿಂದ ವಿವಿಧ ಭತ್ತದ ತಳಿಗಳನ್ನು ಸಂರಕ್ಷಿಸುತ್ತಿರುವ ದಕ್ಷಿಣ ಕನ್ನಡದ ಜಿಲ್ಲೆಯ ಮಿತ್ತ ಬಾಗಿಲು ಗ್ರಾಮದ 79 ವರ್ಷ ವಯಸ್ಸಿನ ಶ್ರೀ ಬಿ.ಕೆ. ದೇವರಾಜ ಅವರು ದೆಹಲಿಯಲ್ಲಿ ಭಾರತದ ರಾಷ್ಟ್ರಪತಿಯವರಾದ ದ್ರೌಪತಿ ಮುರ್ಮು ಇವರಿಂದ 12ನೇ ಸಪ್ಟೆಂಬರ್, 2023 ರಂದು "ಪ್ಲಾಂಟ್‌ಜಿನೋಮ್ ಸೇವಿಯರ್ ಫಾರ್ಮರ್ ಅವಾರ್ಡ್‌ನ್ನು 2020–21ನೇ ಸಾಲಿನಲ್ಲಿ ಸ್ವೀಕರಿಸಿದರು.



## ವಿಶ್ವವಿದ್ಯಾಲಯದ ವಿಜ್ಞಾನಿಗಳು/ವಿದ್ಯಾರ್ಥಿಗಳು ಸ್ವೀಕರಿಸಿದ ಪ್ರಶಸ್ತಿಗಳ ವಿವರ

| # | ವಿಜ್ಞಾನಿ/ವಿದ್ಯಾರ್ಥಿ ಹೆಸರು | ಪ್ರಶಸ್ತಿ | ದಿನಾಂಕ | ಆಯೋಜಕರು |
|---|---|---|---|---|
| 1 | ಡಾ. ಶ್ರೀಕೃಷ್ಣ ಇಸಳೂರ | ಲೂಯಿಸ್ ಪಾಶ್ಚರ್ ಓರೇಶನ್ ಪ್ರಶಸ್ತಿ | 8ನೇ ಜುಲೈ, 2023 | ರಾಷ್ಟ್ರೀಯ ಸಮ್ಮೇಳನ ಎಪ್ರಿಕಾನ (APCRICON), ಉತ್ತರಪ್ರದೇಶ |
| 2 | ಡಾ. ಕವಿತಾ ಜಿ | ಯುವ ವಿಜ್ಞಾನಿ ಪ್ರಶಸ್ತಿ | 8 ಮತ್ತು 9ನೇ ಜುಲೈ, 2023 | ಉತ್ತರಪ್ರದೇಶದ ಲಖ್ನೋದಲ್ಲಿ ನಡೆದ 23ನೇ ರಾಷ್ಟ್ರೀಯ ಸಮ್ಮೇಳನ ಎಪ್ರಿಕಾನ (APCRICON) 2023 |
| 3 | ಡಾ. ಯು.ಎಸ್. ಜಾಧವ | ರಾಜ್ಯ ಮಟ್ಟದ "ಉತ್ತಮ ಗ್ರಂಥಪಾಲಕ" ಪ್ರಶಸ್ತಿ | 12ನೇ ಆಗಸ್ಟ್, 2023 | ಕರ್ನಾಟಕ ಸರಕಾರದ ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು |
| 4 | ಡಾ. ನೇಹಾ ಎಂ. ಬಣಕರ್ | ರಾಷ್ಟ್ರ ಮಟ್ಟದ ರೀಲ್ಸ ಪ್ರಶಸ್ತಿ | 28ನೇ ಸಪ್ಟೆಂಬರ್, 2023 | ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು (KIMS) |
| 5 | ಡಾ. ಯಶವಂತ್ ಎಸ್ ಎಲ್ | ಸಂಶೋಧನಾ ಕೊಡುಗೆಗೆ ಪ್ರಶಸ್ತಿ | 7ನೇ ಅಕ್ಟೋಬರ್, 2023 | 5ನೇ ಅಂತರರಾಷ್ಟ್ರೀಯ ಸಮ್ಮೇಳನ, ನಾಗಪುರ, ಮಹಾರಾಷ್ಟ್ರ |
| 6 | ಡಾ. ನವೀನ್ ಕುಮಾರ್ ಬಿ.ಟಿ. | ಡಾ.ಆರ್.ದ್ವಾರಕಿನಾಥ್ ಪ್ರತಿಷ್ಠಿತ ವಿಶ್ವವಿದ್ಯಾಲಯ ಪ್ರಶಸ್ತಿ | 17ನೇ ನವಂಬರ್, 2023. | ಕೃಷಿ ವಿಶ್ವವಿದ್ಯಾಲಯ, ಯುಎಎಸ್, ಬೆಂಗಳೂರು |
| 7 | ಡಾ. ಡಿ. ರತ್ನಮ್ಮ | "ಭಾರತ ಗೌರವ ಪುರಸ್ಕಾರ" ಮತ್ತು "ಉತ್ಕೃಷ್ಟತೆಯ ಪ್ರಮಾಣಪತ್ರ' | 3ನೇ ಡಿಸೆಂಬರ್, 2023 | ಕೆಟಿಕೆ ಅತ್ಯುತ್ತಮ ಸಾಧಕರು ಮತ್ತು ಶಿಕ್ಷಣ ಪ್ರತಿಷ್ಠಾನ, ನವದೆಹಲಿ, |
| 8 | ಡಾ. ಪ್ರಕಾಶಕುಮಾರ ರಾಠೋಡ | ಅತ್ಯುತ್ತಮ ಮೌಖಿಕ ಪ್ರಸ್ತುತಿ ಪ್ರಶಸ್ತಿ | 2–4ನೇ ಡಿಸೆಂಬರ್, 2023 | ಆರ್.ಎಮ್.ಎಸ್.ಐ. (RMSI) ಆಯ್.ಜಿ.ಎಫ್.ಆರ್.ಐ. (IGFRI) ಅಂತರಾಷ್ಟ್ರೀಯ ಸಮ್ಮೇಳನ, ಬೆಂಗಳೂರು |
| 9 | ಡಾ. ಶಿವಾಲಿಕಾ | ಅತ್ಯುತ್ತಮ ಪೋಸ್ಟರ್ ಪ್ರಸ್ತುತಿ ಪ್ರಶಸ್ತಿ | 2–4ನೇ ಡಿಸೆಂಬರ್, 2023 | ಆರ್.ಎಮ್.ಎಸ್.ಐ. (RMSI) ಆಯ್.ಜಿ.ಎಫ್.ಆರ್.ಐ. (IGFRI) ಅಂತರಾಷ್ಟ್ರೀಯ ಸಮ್ಮೇಳನ, ಬೆಂಗಳೂರು |
| 10 | ಡಾ. ಬಿ.ಎಂ. ವೀರೇಗೌಡ | ಅತ್ಯುತ್ತಮ ಮೌಖಿಕ ಪ್ರಸ್ತುತಿ ಪ್ರಶಸ್ತಿ | 12–14ನೇ ಡಿಸೆಂಬರ್ 2023 | ಶ್ರೀ ವೆಂಕಟೇಶ್ವರ ಪಶುವೈದ್ಯಕೀಯ ವಿಶ್ವವಿದ್ಯಾಲಯ, ತಿರುಪತಿಯ ಎಸ್.ಎಲ್.ಡಿ.ಎಲ್. (SLDL) ನಲ್ಲಿ ನಡೆದ ವಿಬಕಾನ (VIBCON) 2023 |
| 11 | ಡಾ. ಕೇದಾರನಾಥ | ನೇಸಾ (NESA) ವರ್ಷದ ಪರಿಸರವಾದಿ ಪ್ರಶಸ್ತಿ | 16ನೇ ಡಿಸೆಂಬರ್, 2023 | ರಾಷ್ಟ್ರೀಯ ಪರಿಸರ ವಿಜ್ಞಾನ ಅಕಾಡೆಮಿ, ನವದೆಹಲಿ |



ಡಾ. ಶ್ರೀಕೃಷ್ಣ ಇಸಳೂರ



ಡಾ. ಯು.ಎಸ್. ಜಾಧವ

## ಕ್ರೀಡೆಗಳು/ಸಾಂಸ್ಕೃತಿಕ ಚಟುವಟಿಕೆಗಳು

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

- 17ನೇ ಕಪಪಮೀವಿವಿಯ ಅಂತರ ಮಹಾವಿದ್ಯಾಲಯದ ಕ್ರಿಕೆಟ್ ಮತ್ತು ಫುಟ್‌ಬಾಲ್ (ಕಾಲ್ಚೆಂಡು) ಪಂದ್ಯಾವಳಿಯನ್ನು 28 ರಿಂದ 30ನೇ ಡಿಸೆಂಬರ್, 2023 ರವರೆಗೆ ಆಯೋಜಿಸಲಾಗಿತ್ತು. ಪಂದ್ಯಾವಳಿಯಲ್ಲಿ ಒಟ್ಟು ಎಂಟು ಮಹಾವಿದ್ಯಾಲಯಗಳು ಭಾಗವಹಿಸಿದ್ದವು. ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಬೆಂಗಳೂರಿನ ಪಶುವೈದ್ಯಕೀಯ ಮಹಾವಿದ್ಯಾಲಯ ಮತ್ತು ಕ್ರಿಕೆಟ್ ಪಂದ್ಯಾವಳಿಯಲ್ಲಿ ಶಿವಮೊಗ್ಗದ ಪಶುವೈದ್ಯಕೀಯ ಮಹಾವಿದ್ಯಾಲಯ ವಿಜೇತರಾದರು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

- 2 ಮತ್ತು 3ನೇ ಜುಲೈ, 2023 ರಂದು ಮೂರನೇ ಅಂತರ ಮಹಾವಿದ್ಯಾಲಯಗಳ ಶಿಕ್ಷಕರ ಕ್ರೀಡಾಕೂಟವನ್ನು ಆಯೋಜಿಸಲಾಯಿತು. ಸಮಗ್ರ ತಂಡ ಪ್ರಶಸ್ತಿಯನ್ನು ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ ಮತ್ತು ದ್ವಿತೀಯ ಸ್ಥಾನವನ್ನು ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ ಪಡೆದುಕೊಂಡಿತು.




- 17ನೇ ಅಂತರ ಮಹಾವಿದ್ಯಾಲಯಗಳ ಕ್ರೀಡಾಕೂಟವನ್ನು 4 ರಿಂದ 8ನೇ ನವೆಂಬರ್, 2023 ರವರೆಗೆ ಆಯೋಜಿಸಲಾಗಿತ್ತು. ಸಮಗ್ರ ತಂಡ ಪ್ರಶಸ್ತಿಯನ್ನು ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ ಮತ್ತು ದ್ವಿತೀಯ ಸ್ಥಾನವನ್ನು ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ ಪಡೆದುಕೊಂಡಿತು.



### ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು

- ಕೆ.ಎಸ್ ಸಹಕಾರಿ ಅಭಿವೃದ್ಧಿ ಫೆಡರೇಶನ್, ಬೆಂಗಳೂರಿನ ಪ್ರಾಯೋಜಕತ್ವದಲ್ಲಿ 22 ರಿಂದ 24ನೇ, ಡಿಸೆಂಬರ್, 2023 ರವರೆಗೆ ಅಂತರ ಮಹಾವಿದ್ಯಾಲಯ ಯುವಜನೋತ್ಸವವನ್ನು ಆಯೋಜಿಸಲಾಗಿತ್ತು. ಸದರಿ ಚಾಂಪಿಯನ್ಷಿಪ್ ವಿಜೇತರರ ಪೈಕಿ ಹೈನು ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ಹಾಗೂ ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ ಇವರು ಪ್ರಥಮ ಸ್ಥಾನ ಪಡೆದರೇ, ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು ಇವರು ದ್ವಿತೀಯ ಸ್ಥಾನ ಪಡೆದರು.




## ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳು

### ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

- ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದ ರಾಷ್ಟ್ರೀಯ ಸೇವಾ ಯೋಜನೆ ಘಟಕವು 9ನೇ ಅಕ್ಟೋಬರ್, 2023 ರಂದು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಎಚ್‌ಐಎಂಎಸ್), ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಥೆರಪಂಥ್ ಯುವ ಪರಿಷತ್ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಿತು. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯಿಂದ ಸರಾಸರಿ 56 ಯೂನಿಟ್ ರಕ್ತ ಸಂಗ್ರಹಿಸಲಾಯಿತು.



- ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದಲ್ಲಿ ರೇಬೀಸ್ ನಿರ್ಮೂಲನೆಯನ್ನು ಸಾಧಿಸಲು ರೇಬೀಸ್ ವಿರುದ್ಧ ಲಸಿಕೆಯ ಮಹತ್ವದ ಬಗ್ಗೆ ಜಾಗೃತಿ ಅಭಿಯಾನವನ್ನು 28 ನೇ ಸಪ್ಟೆಂಬರ್, 2023 ರಂದು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

- ವನ ಮಹೋತ್ಸವ–2023 ರ ಅಂಗವಾಗಿ 01 ನೇ ಜುಲೈ, 2023 ರಂದು ಸಸಿಗಳನ್ನು ನೆಡುವುದು ಮತ್ತು ಸಸಿಗಳಿಗೆ ನೀರುಣಿಸುವ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಗೌರವಾನ್ವಿತ ಕುಲಪತಿಗಳು, ಮಾನ್ಯ ವ್ಯವಸ್ಥಾಪಕ ಮಂಡಳಿಯ ಸದಸ್ಯರು, ವಿಶ್ವವಿದ್ಯಾಲಯದ ಅಧಿಕಾರಿಗಳು, ಸಿಬ್ಬಂದಿ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಸ್ವಯಂಸೇವಕರು ಉಪಸ್ಥಿತರಿದ್ದರು.



- ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಬ್ರಿಮ್ಸ್) ಸಹಯೋಗದಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು. ರಕ್ತದಾನ ಶಿಬಿರವನ್ನು ಕಪಪಮೀವಿವಿ ಬೀದರನ ಕುಲಪತಿಗಳಾದ ಪ್ರೊ. ಡಾ. ಕೆ.ಸಿ. ವೀರಣ್ಣರವರು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ಗೌರವಾನ್ವಿತ ಕುಲಪತಿಗಳು, ಮಾನ್ಯ ವ್ಯವಸ್ಥಾಪಕ ಮಂಡಳಿಯ ಸದಸ್ಯರು, ವಿಶ್ವವಿದ್ಯಾಲಯದ ಅಧಿಕಾರಿಗಳು, ಸಿಬ್ಬಂದಿ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಸ್ವಯಂಸೇವಕರು ಉಪಸ್ಥಿತರಿದ್ದರು. ಮಹಾವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಒಟ್ಟು 35 ಘಟಕಗಳು (Units)ರಕ್ತ ನೀಡಿದರು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ

- ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗನ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ವಾರ್ಷಿಕ ಶಿಬಿರವನ್ನು ಗದಗ ತಾಲೂಕಿನ



ಹರ್ಲಾಪೂರ ಗ್ರಾಮದಲ್ಲಿ 9 ರಿಂದ 15 ನೇ ಅಕ್ಟೋಬರ್, 2023 ರವರೆಗೆ ಆಯೋಜಿಸಲಾಗಿತ್ತು. ಸದರಿ ಶಿಬಿರದಲ್ಲಿ ಪಶುಸಂಗೋಪನೆಗೆ ವಿಶೇಷ ಒತ್ತು ನೀಡುತ್ತ, ರಾಷ್ಟ್ರೀಯ ಏಕೀಕರಣ, ಕೋಮು ಸೌಹಾರ್ದತೆ ಮತ್ತು ಗ್ರಾಮೀಣಾಭಿವೃದ್ಧಿ ಕುರಿತು ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು.

## ಭೇಟಿ ನೀಡಿದ ಗಣ್ಯರು

- ಐಸಿಎಆರ್, ನವದೆಹಲಿಯ ಕೃಷಿ ಶಿಕ್ಷಣ ವಿಭಾಗದ ಉಪ–ಮಹಾನಿರ್ದೇಶಕರಾದ ಡಾ. ಆರ್. ಸಿ. ಅಗ್ರವಾಲ್ ರವರು 16 ನೇ ಅಕ್ಟೋಬರ್, 2023 ರಂದು ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ), ಬೀದರಗೆ ಭೇಟಿ ನೀಡಿ, ಕೇಂದ್ರದ ವಿವಿಧ ಸಂಶೋಧನೆ ಹಾಗೂ ವಿಸ್ತರಣಾ ಚಟುವಟಿಕೆಗಳ ಕುರಿತು ಪರಿಶೀಲನೆ ನಡೆಸಿದರು. ಅಷ್ಟೇ ಅಲ್ಲದೇ ಅವರು ಕಾರ್ಯಾನುಭವ ತರಬೇತಿಯಲ್ಲಿರುವ ವಿದ್ಯಾರ್ಥಿ (ಇಂಟರ್ನಿಸ್) ಗಳೊಂದಿಗೆ ಸಂವಾದ ನಡೆಸಿದರು.




- ಶ್ರೀ. ಬಸವರಾಜ ಹೊರಟ್ಟಿ, ಗೌರವಾನ್ವಿತ ಅಧ್ಯಕ್ಷರು, ಕರ್ನಾಟಕ ವಿಧಾನ ಪರಿಷತ್ತು, ಕರ್ನಾಟಕ ಸರಕಾರ ರವರು 29 ನೇ ಡಿಸೆಂಬರ್, 2023 ರಂದು ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ), ಬೀದರಗೆ ಭೇಟಿ ನೀಡಿ, ಕೇಂದ್ರದ ವಿವಿಧ ಸಂಶೋಧನೆ ಹಾಗೂ ವಿಸ್ತರಣಾ ಚಟುವಟಿಕೆಗಳ ಕುರಿತು ಪರಿಶೀಲನೆ ನಡೆಸಿದರು. ಬೀದರ ಜಿಲ್ಲೆಯ ಜಿಲ್ಲಾಧಿಕಾರಿಯಾದ ಶ್ರೀ. ಗೋವಿಂದ ರೆಡ್ಡಿ ರವರು, ಪೋಲೀಸ್ ವರಿಷ್ಠಾಧಿಕಾರಿಯಾದ ಶ್ರೀ. ಚನ್ನಬಸವಣ್ಣ ಎಲ್ ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು ಉಪಸ್ಥಿತರಿದ್ದರು.



## ಒಡಂಬಡಿಕೆಗಳು

ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಯ ಗುಣಮಟ್ಟವನ್ನು ಸುಧಾರಿಸಲು ಕಪಪಮೀವಿವಿ, ಬೀದರವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಕೆಳಗಿನ ಸಂಸ್ಥೆಗಳೊಂದಿಗೆ ಏಳು ಒಡಂಬಡಿಕೆಗಳಿಗೆ ಸಹಿ ಹಾಕಿದೆ.

- ಮಹಾರಾಷ್ಟ್ರ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಾಗ್ಪುರ, ಮಹಾರಾಷ್ಟ್ರ
- ಐ.ಸಿ.ಎ.ಆರ್.– ನೆಟ್‌ವರ್ಕ್ ಪ್ರೊಜೆಕ್ಟ್ ಆನ್ ಎನಿಮಲ್ ಜೆನೆಟಿಕ್ಸ್ ರಿಸೋರ್ಸಸ್, ಕರ್ನಾಲ್
- ಮೇ॥ ಯಶಸ್ವಿ ಫಿಶ್ ಮೀಲ್ ಆಂಡ್ ಆಯಿಲ್ ಕಂಪನಿ, ಪಿತ್ರೋಡಿ ಪೋಸ್ಟ್, ಉಡುಪಿ
- ಐ.ಸಿ.ಎ.ಆರ್.– ಮಿಥುನ್ ರಾಷ್ಟ್ರೀಯ ಸಂಶೋಧನಾ ಕೇಂದ್ರ, ದಿಮಾಪೂರ, ನಾಗಾಲ್ಯಾಂಡ್
- ಜೈವಿಕ ತಂತ್ರಜ್ಞಾನ ಇಲಾಖೆ, ನವದೆಹಲಿ
- ಆಲ್‌ಟೆಕ್, ಕೆಂಟುಕಿ, ಅಮೇರಿಕಾ
- ಐ.ಸಿ.ಎ.ಆರ್. – ನಿವೇದಿ, ಬೆಂಗಳೂರು




**ಪ್ರಧಾನ ಸಂಪಾದಕರು**
**ಡಾ॥ ಎನ್.ಎ. ಪಾಟೀಲ**
ವಿಸ್ತರಣಾ ನಿರ್ದೇಶಕರು

**ಸಹ ಸಂಪಾದಕರು**
**ಡಾ॥ ಪ್ರಕಾಶಕುಮಾರ ರಾಠೋಡ**
ಸಹ ಪ್ರಾಧ್ಯಾಪಕರು, ವಿಸ್ತರಣಾ ನಿರ್ದೇಶನಾಲಯ

**ಮುದ್ರಿತ ವಿಷಯ** **ತೆರೆದ ಅಂಚೆ**
**ಇವರಿಗೆ,**

**ಬಟವಡೆಯಾಗದಿದ್ದಲ್ಲಿ ಈ ವಿಳಾಸಕ್ಕೆ ಹಿಂದಿರುಗಿಸಿ :**
**ವಿಸ್ತರಣಾ ನಿರ್ದೇಶಕರು**
ಕ.ಪ.ಪ.ಮೀ.ವಿ.ವಿ. ನಂದಿನಗರ, ಅಂಚೆ ಪೆಟ್ಟಿಗೆ ಸಂಖ್ಯೆ–06,
ಬೀದರ–585 226, ಕರ್ನಾಟಕ
ಮಿಂಚಂಚೆ: dekvafsu@gmail.com

